ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 106/2011
ಡಿ.ಡಬ್ಲ್ಯೂ : 1

ದಿನಾಂಕಃ 07-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಆರ್ ಎಚ್ ವಕೀಲರಿಂದಃ

1. ನಾನು ವಾದಿ, ಪ್ರತಿವಾದಿಯವರು ಮಾಗಣೆ ಬ್ರಾಹ್ಮಣ ಸಮಾಜಕ್ಕೆ ಸೇರಿದವರು. ವಿಷ್ಣುಮೂರ್ತಿ ದೇವಸ್ಥಾನ ಎನ್ನುವುದು ಮಾಗಣೆ ಬ್ರಾಹ್ಮಣ ಸಮಾಜದವರು ಪೂಜಿಸುವ ದೇವಸ್ಥಾನವಾಗಿರುತ್ತದೆ. ನಾನು ವಿಷ್ಣುಮೂರ್ತಿ ಸೇವಾ ಟ್ರಸ್ಟ್ ನ ಅಧ್ಯಕ್ಷನಿರುತ್ತೇನೆ. ಸದರಿ ಟ್ರಸ್ಟ್ ನೋಂದಾಯಿತ ಟ್ರಸ್ಟ್ ಆಗಿರುವುದಿಲ್ಲ. ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನ ಇದ್ದು, ಅದರಿಂದ ಯಾವುದೇ ಉತ್ಪತ್ತಿ ಇರುವುದಿಲ್ಲ. 25 ಕುಟುಂಬದವರು ಖರ್ಚು ಮಾಡಿ ನಡೆಸುತ್ತಿದ್ದೇವೆ. ನಾನು ಈಗ ವಾಸ ಇರುವುದು ತುಮಕೂರಿನಲ್ಲಿ. ಈಗೆ 2 ವರ್ಷಗಳಿಂದ ಆ ಟ್ರಸ್ಟ್ ನಲ್ಲಿ ಅಧ್ಯಕ್ಷನಿರುತ್ತೇನೆ. ವಿಷ್ಣುಮೂರ್ತಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು ಪ್ರತ್ಯೇಕವಾಗಿ ಮುಕ್ತೇಶರರು ಇರುತ್ತಾರೆ.

2. ದೇವಸ್ಥಾನಕ್ಕೆ ನಮಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದವರಿಗೆ ಹಾಗೂ ಸೂರ್ಯನಾರಾಯಣ ಕುಟುಂಬದವರಿಗೆ ಹಾಗೂ ವಾದಿಯವರಿಗೆ ಒಳ್ಳೆಯ ಭಾಂದವ್ಯ ಇರುತ್ತದೆ ಎಂದರೆ ಸಾಕ್ಷಿ ವಾದಿಯವರ ಜೊತಗೆ ಮೊದಲು ಭಾಂದವ್ಯ ಇತ್ತು ಎಂದು ನುಡಿಯುತ್ತಾರೆ. ವಾದಿಯವರ ಕುಟುಂಬದವರನ್ನು ಸುಬ್ಬಣ್ಣ ಅಡಿಗರ ಮನೆ ಎಂದು ಕರೆಯುತ್ತಾರೆ ಎಂದರೆ ಸರಿ. ನಾನು ಸುಬ್ಬಣ್ಣ ಅಡಿಗರವರನ್ನು ನೋಡಿರುವುದಿಲ್ಲ. ಸುಬ್ಬಣ್ಣ ಅಡಿಗರವರ ದೊಡ್ಡಪ್ಪನ ಹೆಂಡತಿ ಸಿಂಗಾರಿಯಮ್ಮರವರನ್ನು ನಾನು ನೋಡಿರುವುದಿಲ್ಲ.

3. ವಾದಿ ನಾಗಾರಾಜ ಹತ್ವಾರ ಎಂದರೆ ಕಮಲಮ್ಮನವರ ಮಗನಿರುತ್ತಾರೆ. ವಿಷ್ಣುಮೂರ್ತಿ ದೇವಸ್ಥಾನ ಇರುವುದು ಸರ್ಕಾರಿ ಜಾಗದಲ್ಲಿ. ನಮ್ಮ ಟ್ರಸ್ಟ್ ಗೆ ಸಂಬಂಧಪಟ್ಟಂತೆ ಅಕೌಂಟ್ ಮಾಡುತ್ತೇವೆ, ಆದರೆ ಆಡಿಟ್ ಮಾಡಿಸುವುದಿಲ್ಲ. ದಾವೆಯಲ್ಲಿ 1 ನೇ ವಾದಿ ಹಾಗೂ 2 ನೇ ಪ್ರತಿವಾದಿಯವರು ಪ್ರತ್ಯೇಕ, ಪ್ರತ್ಯೇಕವಾಗಿ ಲಿಖಿತ ಹೇಳಿಕೆ ಸಲ್ಲಿಸಿದ್ದು ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸುಬ್ಬಣ್ಣ ಅಡಿಗರವರ ಅಜ್ಜಿ ಸುಂದರಿಯಮ್ಮ ಇದ್ದರು ಎಂದರೆ

ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಮಲಮ್ಮರವರಿಗೆ ವೆಂಕಟರಮಣ ಎಂಬ ಅಣ್ಣ ಇದ್ದರು ಎಂದರೆ ಸಾಕ್ಷಿ ಹೆಸರು ಕೇಳಿರುತ್ತೇನೆ, ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ಸುಬ್ಬಣ್ಣ ಅಡಿಗರವರ ಕುಟುಂಬದವರು ಆ ದೇವಸ್ಥಾನದ ಅರ್ಚಕರಾಗಿದ್ದರು ಎಂದರೆ ಸಾಕ್ಷಿ ಅಡಿಗ ಕುಟುಂಬದವರು ದೇವಸ್ಥಾನದ ಅರ್ಚಕರು ಎಂದು ನುಡಿಯುತ್ತಾರೆ. ದೇವಸ್ಥಾನದ ಉತ್ತರ ಬಾಗಿಲಿಗೆ ತಾಗಿಕೊಂಡಂತೆ ಅವರ ಮನೆ, ಬಾವಿ, ಜಾಗ ಇರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ವಾದಿಯವರ ಸಾಧನೆ ಏನು ಎಂದು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಇರುವಂತದ್ದು ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಎಂದರೆ ಸರಿ.

5. 1 ನೇ ಪ್ರತಿವಾದಿ ಸೂರ್ಯ ನಾರಾಯಣ ಹತ್ವಾರ್ ರವರ ಮನೆ ದೇವಸ್ಥಾನದಿಂದ ಅರ್ಧ ಕಿ.ಮೀ ದೂರದಲ್ಲಿರುತ್ತದೆ. ಅವರು ದೊಡ್ಡ ಮನೆತನದವರು ಆಗಿದ್ದು ಎಲ್ಲಾ ಕಡೆ ಅವರ ಆಸ್ತಿ ಇರುತ್ತದೆ, ದೇವಸ್ಥಾನದ ಸುತ್ತಮುತ್ತಲೂ ಸಹ ಅವರ ಆಸ್ತಿ ಇರುತ್ತದೆ. ನನ್ನ ಪ್ರಕಾರ 1 ನೇ ಪ್ರತಿವಾದಿಗೆ 1936 ರ ಪಾಲು ಪಟ್ಟಿಯಂತೆ ಹಕ್ಕು ಬಂದಿರುತ್ತದೆ. ಆ ವಿಭಾಗದ ಪತ್ರವನ್ನು 1 ನೇ ಪ್ರತಿವಾದಿ ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತಾರೆ. ನಾನು ಆ ವಿಭಾಗ ಪತ್ರವನ್ನು ಓದಿ ನೋಡಿರುವುದಿಲ್ಲ. 1 ನೇ ಪ್ರತಿವಾದಿ ಹೇಳಿರುತ್ತಾರೆ.

6. 2012 ರಿಂದ ಇಲ್ಲಿಯವರೆಗೆ ದಾವಾ ಆಸ್ತಿ 1 ನೇ ಪ್ರತಿವಾದಿಗೆ ಪಾಲು ಪಟ್ಟಿಯ ಮುಖಾಂತರ ಬಂದಿರುತ್ತದೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿ. ಎಮ್ ಆರ್ ದಾಖಲೆಯನ್ನು ನಾನು ನೋಡಿರುತ್ತೇನೆ. ಅದರ ಪ್ರತಿಯನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ಪಾಲು ಪಟ್ಟಿಯ ಪ್ರಕಾರ ಶ್ರೀನಿವಾಸ ಹತ್ವಾರ್ ರವರು 1 ನೇ ಪ್ರತಿವಾದಿಯ ತಂದೆ ಇರುತ್ತಾರೆ. 1936 ರ ಪಾಲು ಪಟ್ಟಿ ಆಗಬೇಕಾದರೆ ಯಾವುದೇ ರೀತಿಯ ಕೈ ಬರಹದ ಪಹಣಿಗಳು ಇರಲಿಲ್ಲ ಎಂದರೆ ಸರಿ. ನನಗೆ ಪಾಲು ಪಟ್ಟಿ ತೋರಿಸಿದರೆ ಅದನ್ನು ನಾನು ನೋಡಿ ಹೇಳಬಹುದು. ಸಾಕ್ಷಿಗೆ 1936 ರ ಪಾಲು ಪಟ್ಟಿ ತೋರಿಸಿದ್ದು ಸಾಕ್ಷಿ ಪಾಲು ಪಟ್ಟಿ ನೋಡಿ ಇದೇ ಪಾಲು ಪಟ್ಟಿ ಎಂದು ನುಡಿದಿದ್ದು ಸದರಿ ದಾಖಲೆಯನ್ನು **ನಿ.ಪಿ.18** ಎಂದು ಗುರುತಿಸಲಾಯಿತು.

7. ಸದರಿ ಪಾಲು ಪಟ್ಟಿಯಲ್ಲಿ ಶ್ರೀನಿವಾಸ ಹತ್ವಾರ್ ಗೆ ದಾವಾ ಆಸ್ತಿಯಲ್ಲಿ ಯಾವ ದಾಖಲೆಯ ಆಧಾರದ ಮೇಲೆ ಹಕ್ಕು ಬಂದಿರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಅವರ

ಹಕ್ಕಿನ ಆಧಾರದ ಮೇಲೆ ಪಾಲು ಪಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1936 ರ ಪೂರ್ವದಲ್ಲಿ ಶ್ರೀನಿವಾಸ ಹತ್ವಾರ್ ರವರಿಗೆ ಹಾಗೂ ಅವರ ಕುಟುಂಬದವರಿಗೆ ಯಾವ ರೀತಿ ಹಕ್ಕು ಬಂದಿರುತ್ತದೆ ಎಂದು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ 1936 ರ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

8. 1936 ರ ಹಿಂದಿನ ದಾಖಲೆಗಳನ್ನು ಕೊಡಿ ಎಂದು ನಾನು 1 ನೇ ಪ್ರತಿವಾದಿಯಲ್ಲಿ ಕೇಳಿರುವುದಿಲ್ಲ. ನಿ.ಡಿ. 2 ಸರ್ವೆ ನಂಬ್ರ 119 /1 ಎ ಚಿತ್ತಾ ರಿಜಿಸ್ಟರ್ ನಲ್ಲಿ 50 ಸೆಂಟ್ಸ್ ಜಾಗ ಸಿಂಗಾರಿಯಮ್ಮರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ದಾಖಲೆ ನೋಡಿ ಹೌದು ಎಂದು ನುಡಿಯುತ್ತಾರೆ. ನಿ.ಡಿ. 2 ರಲ್ಲಿ ನಮೂದಿಸಿರುವ ಸಿಂಗಾರಿಯಮ್ಮ ಎಂದರೆ ವಾದಿಯ ಅಜ್ಜಿ ಎಂದರೆ ಸಾಕ್ಷಿ ವಾದಿಯ ಇನ್ನೊಂದು ಕವರಿನಲ್ಲಿ ಸಹ ಸಿಂಗಾರಿಯಮ್ಮ ಅಂತ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿ ಯಾವುದೇ ಕಾಲದಿಂದ ಸಂಬಂಧಿಕರಲ್ಲ ಎಂದರೆ ಸರಿ. ವಾದಿಯ ಕುಟುಂಬದವರು ದಾವಾ ಸ್ವತ್ತನ್ನು ಪ್ರತಿವಾದಿಯ ಕುಟುಂಬಕ್ಕೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

9. ನಿ.ಡಿ. 3 ರಲ್ಲಿ ಸುಂದರಿಯಮ್ಮನವರ ಹೆಸರು ಇರುತ್ತದೆ ಎಂದರೆ ಸಾಕ್ಷಿ ನಿ.ಡಿ. 3 ರಲ್ಲಿ ನಮೂದಿಸಿರುವ ಸುಂದರಿಯಮ್ಮ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶ್ರೀನಿವಾಸ ಹತ್ವಾರ್ ರವರ ಕುಟುಂಬದಲ್ಲಿ ಸುಂದರಿಯಮ್ಮ ಎಂಬ ಯಾವ ಹೆಂಗಸು ಸಹ ಇದ್ದಿರಲಿಲ್ಲ. RTC 1967-68 ಪಹಣಿ ಪತ್ರಿಕೆ ಪ್ರಾರಂಭವಾದ ಸಮಯದಲ್ಲಿ ಸುಂದರಿಯಮ್ಮನವರ ಹೆಸರು ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1980-81 ರಲ್ಲಿ ಶ್ರೀನಿವಾಸ ಹತ್ವಾರ್ ರವರ ಹೆಸರನ್ನು ಸೇರ್ಪಡೆ ಮಾಡಲಾಗಿದೆ ಎಂದರೆ ಸಾಕ್ಷಿ 1937 ನೇ ಇಸವಿಯಿಂದ ಅವರ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ.

10. 1980-81 ರಲ್ಲಿ ಯಾವುದೇ ಮುಟೇಶನ್ ಆದೇಶ ಇಲ್ಲದೇ ಅನಧಿಕೃತವಾಗಿ 1 ನೇ ಪ್ರತಿವಾದಿಯ ಹೆಸರನ್ನು ದಾವಾ ಸ್ವತ್ತಿಗೆ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಎ ಸಿ ನ್ಯಾಯಲಯದಲ್ಲಿ 1936 ರ ದಸ್ತಾವೇಜನ್ನು ಸಿವಿಲ್ ನ್ಯಾಯಲಯದಲ್ಲಿ ಸಿದ್ಧಪಡಿಸಿಕೊಳ್ಳಿ ಎಂದು ವಜಾ ಪಡಿಸಲಾಗಿದೆ ಎಂದರೆ ಸರಿ. ಎ ಸಿ ರವರ ಆದೇಶದಲ್ಲಿ ಪಾಲು ಪಟ್ಟಿಯಂತೆ ಭಾಗ ಬಂದಿರುತ್ತದೆ ಎಂಬುದಾಗಿ ಬರೆದಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ 10 ಸೆಂಟ್ಸ್ ಜಾಗದಲ್ಲಿ ನಾವು ಎರಡು ಕಟ್ಟಡವನ್ನು ಕಟ್ಟಿ ಸುತ್ತಲೂ ತಂತಿ ಬೇಲಿ ಹಾಕಿರುತ್ತೇವೆ.

ಕಟ್ಟಡ ಕಟ್ಟುವ ಪೂರ್ವದಲ್ಲಿ ಪಂಚಾಯಿತಿಯಿಂದ ಪರವಾನಿಗೆ ಕೊಟ್ಟಿರುತ್ತಾರೆ, ನನಗೆ ಗೊತ್ತಿರುವುದಿಲ್ಲ.

11. ಪಂಚಾಯತಿಯವರು ಸದರಿ ಜಾಗದಲ್ಲಿ ತಕಾರಾರು ಇರುವುದರಿಂದ ನಿರ್ಮಾಣ ಕಾರ್ಯ ನಿಲ್ಲಿಸಿಬೇಕೆಂದು ನಿ.ಪಿ.14 ರಂತೆ ಆದೇಶಿಸಿರುತ್ತಾರೆ ಎಂದರೆ ಸರಿ. ಈ ರೀತಿ ನಿ.ಪಿ. 14 ರಲ್ಲಿ ನಮೂದಿಸಿದ್ದರೂ ಸಹ ಪಂಚಾಯಿತಿಯವರ ಆದೇಶಕ್ಕೆ ಮಾನ್ಯತೆ ಕೊಡದೇ ಕಟ್ಟಡ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ನೋಂದಣಿ ಆದ ದಸ್ತಾವೇಜನ್ನು ಮಾಡಿಕೊಟ್ಟಿರುವುದಿಲ್ಲ. ಪಿಲ್ಲರ್ ಹಾಕಿ ಕಟ್ಟಡ ಕಟ್ಟಿದ್ದು ಸದರಿ ಭೂಮಿಯನ್ನು ಭೂ ಪರಿವರ್ತನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಭೂ ಪರಿವರ್ತನೆ ಪ್ರತ್ಯೇಕ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

12. ಈ ವ್ಯಾಜ್ಯ ಇತ್ಯರ್ಥಕ್ಕೆ ಇರುವಾಗಲೇ ಕಾನೂನು ಬಾಹಿರ ಕಟ್ಟಡ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯ ಸಂಪೂರ್ಣ 50 ಸೆಂಟ್ಸ್ ಜಾಗ ವಾದಿಯವರ ಸ್ವಾಧೀನದಲ್ಲಿ ಇದ್ದ ಜಾಗವಾಗಿದ್ದು 2011 ರಲ್ಲಿ ವಾದಿಯವರಿಂದ ಬಲತ್ಕಾರವಾಗಿ ಜಾಗವನ್ನು ಪಡೆದುಕೊಂಡು 4.5 ಸೆಂಟ್ಸ್ ನಲ್ಲಿ ಕಟ್ಟಡ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಅದರ ಉಳಿದ ಅಂಶಕ್ಕೆ ಸಂಬಂಧಪಟ್ಟಂತೆ ವಾದಿಗಳು 4 RTC ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಈ 4 RTC ಗಳು ಬೇರೆ ಬೇರೆಯವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸ್ಥಳದಲ್ಲಿ ಹಾಡಿ ಜಾಗವಾಗಿದ್ದು ಯಾವುದೇ ವಿಭಜನೆ ಕಂಡು ಬರುವುದಿಲ್ಲ ಎಂದರೆ ಸರಿ.

13. 1 ನೇ ಪ್ರತಿವಾದಿಗೆ 1936 ರ ಪಾಲು ಪಟ್ಟಿಯ ಪ್ರಕಾರ ಹಕ್ಕು ಬಂದಿರುವುದಿಲ್ಲ, ವಾದಿಯವರ ಆಸ್ತಿಯನ್ನು ನುಂಗಿ ಹಾಕುವ ಸಲುವಾಗಿ 1936 ರ ಪಾಲು ಪಟ್ಟಿಯಲ್ಲಿ ಸೇರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1967-68 ರಲ್ಲಿ ಅವರ ಹೆಸರನ್ನು ಸೇರಿಕೊಳ್ಳದೇ 1980-81 ರಲ್ಲಿ ಕಂದಾಯ ಇಲಾಖೆಯ ಅಧಿಕಾರಿಯವರ ಜೊತೆಗೆ ಶಾಮಿಲಾಗಿ ಅವರ ಹೆಸರನ್ನು ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರು ಒಂದು ದರ್ಕಾಸ್ತು ಆದೇಶವನ್ನು ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ಸರ್ವೆ ನಂಬ್ರ 119/1 ಎ 4 ರಲ್ಲಿ 50 ಸೆಂಟ್ಸ್ ಜಾಗ ಸುಬ್ಬಣ್ಣ ಅಡಿಗ ಹಾಗೂ ಸಿಂಗಾರಿಯಮ್ಮರವರ ಹೆಸರಿಗೆ ಜಂಟಿಯಲ್ಲಿ ಇರುತ್ತದೆ ಎಂದರೆ ಸರಿ. ಇ ಇಬ್ಬರು ವಾದಿಯವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿ.

14. ಈ ಆಸ್ತಿಯಲ್ಲಿ ಸುಬ್ಬಣ್ಣ ಅಡಿಗ ಹಾಗೂ ಸಿಂಗಾರಿಯಮ್ಮನವರು ವಿಭಾಗ ಮಾಡಿಕೊಂಡಿದ್ದು ಸುಬ್ಬಣ್ಣ ಅಡಿಗರವರಿಗೆ 39.5 ಸೆಂಟ್ಸ್ ಜಾಗ ಹಾಗೂ ಸಿಂಗಾರಿಯಮ್ಮನವರಿಗೆ 10.5 ಸೆಂಟ್ಸ್ ಜಾಗ ಹೋಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಬ್ಬಣ್ಣ ಅಡಿಗರವರಿಗೆ ಹೋದ ಜಾಗದಲ್ಲಿ ಅವರು ಅವರ ಮಗಳು ಕಮಲಮ್ಮನವರಿಗೆ ವಿಲ್ ನಾಮೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿಂಗಾರಿಯಮ್ಮನವರಿಗೆ ಹೋದ 10.5 ಸೆಂಟ್ಸ್ ಜಾಗವನ್ನು ಪ್ರಸ್ತುತ ಅವರ ಮರಿಮಕ್ಕಳು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ಸುರೇಶ ಹಾಗೂ ಸತೀಶರವರು ಆ ಜಾಗವನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದು ನುಡಿಯುತ್ತಾರೆ.

15. ಉತ್ತರದ 5.5 ಸೆಂಟ್ಸ್ ಜಾಗವನ್ನು ನಾಗಾರಾಜ ಹತ್ವಾರ್ ರವರು 2000 ರಲ್ಲಿ ಸುರೇಶ ಹಾಗೂ ಸತೀಶರವರಿಂದ ಕ್ರಯ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1905 ಪಾಲು ಪಟ್ಟಿ 1916 ರ ದರ್ಕಾಸ್ತು, 1936 ರ ವಿಲ್ ನಾಮೆಯಂತೆ ದಾವಾ ಆಸ್ತಿ ಎನ್ನುವಂತದ್ದು ವಾದಿ ಹಾಗೂ ಅವರ ಕುಟುಂಬಕ್ಕೆ ಸೇರಿದ್ದು ಎಂದು ದಾಖಲೆಗಳು ಇರುತ್ತದೆ ಎಂದರೆ ಸಾಕ್ಷಿ 1936 ರಿಂದ ಶ್ರೀನಿವಾಸ ಹತ್ವಾರ್ ರವರ ಹೆಸರಿನಲ್ಲಿ ದಾಖಲೆಗಳು ಇರುತ್ತದೆ ಎಂದು ನುಡಿಯುತ್ತಾರೆ.

16. ಅನಧಿಕೃತವಾಗಿ ವಾದಿಗೆ ಸಂಬಂಧಪಟ್ಟ ಜಾಗವನ್ನು ಪ್ರತಿವಾದಿಗಳು ಸೇರಿಸಿಕೊಂಡು ನಮ್ಮ ಜಾಗ ಎಂದು ವಾದಿಸುತ್ತಿದ್ದಾರೆ ಎಂದರೆ ಸರಿಯಲ್ಲ. 25 ಸೆಂಟ್ಸ್ ಜಾಗ ಬೆಲೆ ಬಾಳುವ ಆಸ್ತಿಯಾಗಿದ್ದು, ಅವರಿಗೆ ಸೇರಿಲ್ಲದ ಆಸ್ತಿ ಆಗಿದ್ದರಿಂದ ಅವರು ನನಗೆ ದಾನಪತ್ರ ಬರೆದುಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಸಾಕ್ಷಿ ಹೇಳಲು ಹೇಳಿರುತ್ತಾರೆ ಎಂದರೆ ಸರಿ, ಸಾರ್ವಜನಿಕ ದೇವಸ್ಥಾನ ಆಗಿದ್ದರಿಂದ ನನಗೆ ಹಿತಾಸಕ್ತಿ ಇರುತ್ತದೆ. ನಾನು ಪ್ರತ್ಯೇಕವಾಗಿ ಲಿಖಿತ ಹೇಳಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಆಕ್ಷೇಪಣೆಯನ್ನು ನನ್ನ ಆಕ್ಷೇಪಣೆ ಎಂದು ಹೇಳಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಅರ್ಹನಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಲಿಖಿತ ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

17. 2 ನೇ ಪ್ರತಿವಾದಿ ಲಿಖಿತ ತಕಾರಾರಿನಲ್ಲಿ ಟ್ರಸ್ಟ್ ಗೂ ದೇವಸ್ಥಾನಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಅದು ತಪ್ಪು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಈಗಲೂ ಸಹ ವಾದಿಯ ಸ್ವಾಧೀನಾನುಭವದಲ್ಲಿ ಇದ್ದು 4.5 ಸೆಂಟ್ಸ್ ಜಾಗ

ನಾನು ಅತಿಕ್ರಮಣ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪ್ರೇರೆಪಣೆಯಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿ ಕೇಳಿದ ನಿವೃತ್ತಿಗೆ ಅರ್ಹರು ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ